quarters ಚಾಮರಾಜನಗರ. ಅಲ್ಲಿಗೆ ಮಾನ್ಯ ವಾಟಾಳ್ ನಾಗರಾಜ್‌ರವರು ಶಾಸಕರಾಗಿದ್ದಾರೆ. ನನ್ನ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರು ಬಹಳಷ್ಟು ಸಂಖ್ಯೆಯಲ್ಲಿದ್ದಾರೆ. ಆದ್ದರಿಂದ ಹೋಬಳಿ ಕೇಂದ್ರಗಳಲ್ಲಿ, ಒಂದು ಕ್ಷೇತ್ರಕ್ಕೆ ಒಂದು ಶಾದಿಮಹಲ್ ಕೊಡುವಂಥ ಕೆಲಸವನ್ನು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಇಕ್ಬಾಲ್ ಅನ್ಸಾರಿ : ತಾಲ್ಲೂಕಿಗೆ 20 ಲಕ್ಷ ರೂಪಾಯಿಗಳ ಲಿಮಿಟ್ ಮಾಡಿದ್ದೇವೆ. ತಾಲ್ಲೂಕು ಕೇಂದ್ರಗಳ ಹೋಬಳಿಗಳಲ್ಲಿ 5 ಲಕ್ಷ, 10 ಲಕ್ಷ ರೂಪಾಯಿಗಳ requirement ಇರುತ್ತದೆ. ಅದಕ್ಕೆ ತಾವು estimate ಸಲ್ಲಿಸಿದರೆ ತಮಗೂ ಮಾಡಿಕೊಡಲಾಗುತ್ತದೆ. ತಾಲ್ಲೂಕಿನಲ್ಲಿ ಎಂದರೆ ಅದು ತಾಲ್ಲೂಕು head quarter ನಲ್ಲಿಯೇ ಇರಬೇಕು ಎಂದೇನಿಲ್ಲ. ಹೋಬಳಿಗಳಲ್ಲೂ ಮಾಡಬಹುದು. ಅಲ್ಪಸಂಖ್ಯಾತರ ಜನಸಂಖ್ಯೆ ಜಾಸ್ತಿ ಇದ್ದರೆ ಅಲ್ಲೂ ಸಹ ಸರ್ಕಾರ ಕೊಡುತ್ತದೆ.

ಪ್ರಶ್ನೆ ಸಂಖ್ಯೆ 1527

ಅಧ್ಯಕ್ಷರು : ಪ್ರಕಾಶ್ ಖಂಡ್ರೆಯವರ ಈ ಪ್ರಶ್ನೆ ಆರ್ಥಿಕ ಇಲಾಖೆಗೆ ವರ್ಗಾವಣೆಯಾಗಿದೆ.

ಪ್ರಶ್ನೆ ಸಂಖ್ಯೆ 531

ಅಧ್ಯಕ್ಷರು : ರಾಮಲಿಂಗಾರೆಡ್ಡಿಯವರೇ, ಈಗ ಸಾರಿಗೆ ಸಚಿವರು ಬಂದಿಲ್ಲ. ಕೊನೆಯಲ್ಲಿ ಬರುತ್ತಾರಂತೆ. ಆಗ ನಿಮ್ಮ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

250 (1592) ಶ್ರೀ ತಿಮ್ಮರಾಯಪ್ಪ ಕೆ.ಎಂ (ಪಾವಗಡ) : ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾವಗಡ ತಾಲ್ಲೂಕಿನ ನಿಡಗಲ್ ಬೆಟ್ಟ ಐತಿಹಾಸಿಕ ಪ್ರದೇಶವಾಗಿದ್ದು ಇದನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅನೇಕ ರಾಜ ಮಹಾರಾಜರು ಆಳಿದ ಇತಿಹಾಸ ಇರುವ ಈ ಪ್ರದೇಶಕ್ಕೆ ಅನೇಕ ಸಾರ್ವಜನಿಕರು ಬಂದು ಹೋಗುವುದು ಹಾಗೂ ಪುಣ್ಯ ಸ್ಥಳವೆಂದು ಪ್ರತೀತಿ ಇರುವ ಈ ಬೆಟ್ಟಕ್ಕೆ ಸರ್ಕಾರದ ವತಿಯಿಂದ ಅನುದಾನ ಬಿಡುಗಡೆ ಗೊಳಿಸಲಾಗುವುದೇ?

ಶ್ರೀ ಬಿ.ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಈ ಸ್ಥಳಕ್ಕೆಂದೆ ಅನುದಾನ ಬಿಡುಗಡೆಗೊಳಿಸಿರುವುದಿಲ್ಲ. ಆದರೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ತುಮಕೂರು ಇವರಿಗೆ 2006-07ನೇ ಸಾಲಿನಲ್ಲಿ ರೂ.14.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನದಲ್ಲಿ ಸ್ಥಳದಲ್ಲಿಯೂ ಸಹ ಅಭಿವೃದ್ಧಿ ಕಾರ್ಯಗಳನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯು ಕೈಗೊಳ್ಳುವುದು.

ಶ್ರೀ ಕೆ.ಎಂ.ತಿಮ್ಮರಾಯಪ್ಪ : ಪಾವಗಡ ತಾಲ್ಲೂಕಿನ ನಿಡಗಲ್ ಬೆಟ್ಟ ಐತಿಹಾಸಿಕ ಪ್ರದೇಶವಾಗಿದ್ದು, ಅಲ್ಲಿ ಅನೇಕ ರಾಜ ಮಹಾರಾಜರುಗಳು ಆಳಿದ ಇತಿಹಾಸವಿದ್ದು, ಇದನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಐದನೇ ಶತಮಾನದಲ್ಲಿ ನೊಳಂಬರು, ಹತ್ತನೇ ಶತಮಾನದಿಂದೀಚೆಗೆ ಚೋಳರು, ತದನಂತರ ವಿಜಯನಗರ ಸಾಮ್ರಾಜ್ಯದ ದೊರೆಗಳು ಅವರ ಅಡಿಯಲ್ಲಿ ಅರಸರು ದೊರೆಗಳು ಅಲ್ಲಿ ಆಳ್ವಿಕೆ ನಡೆಸಿ, ಕೋಟೆ ಕೊತ್ತಲಗಳನ್ನು ನಿರ್ಮಾಣ ಮಾಡಿ, ವೈಭವಯುತವಾದ ಆಡಳಿತವನ್ನು ನಡೆಸಿರತಕ್ಕಂಥ ಒಂದು ಪ್ರದೇಶವಾಗಿದೆ. ಅಲ್ಲಿ 40 ಶಿಲಾಶಾಸನಗಳು ದೊರೆತಿವೆ. 70 ದೇವಸ್ಥಾನಗಳು ಶಿಥಿಲಾವಸ್ಥೆಯಲ್ಲಿವೆ. ಐದಾರು ದೇವಸ್ಥಾನಗಳು ಜೀರ್ಣೋದ್ಧಾರವಾಗಿವೆ. ಜೈನ ದೇವಸ್ಥಾನಗಳು, ನರಸಿಂಹಸ್ವಾಮಿ ದೇವಸ್ಥಾನ, ಶ್ರೀರಾಮಲಿಂಗೇಶ್ವರ ದೇವಸ್ಥಾನ, ಉತ್ತಮವಾದಂಥ ಕಲ್ಯಾಣಿ ಸಹಾ ಅಲ್ಲಿ ಇದೆ. ಅಲ್ಲಿ ಫಿರಂಗಿಗಳೂ ಸಹ ಇವತ್ತು ನಮ್ಮ ಕಣ್ಣಮುಂದೆ ಕಾಣುತ್ತಿದೆ. ಆ ಒಂದು ಪ್ರದೇಶವನ್ನು ಅಭಿವೃದ್ಧಿ ಪಡಿಸಲಿಕ್ಕೆ ಪ್ರವಾಸೋದ್ಯಮ ಇಲಾಖೆಯವರು ಜಿಲ್ಲಾ ಮಟ್ಟದ ಸಮಿತಿಯವರು ಕಾರ್ಯಕ್ರಮವನ್ನು ರೂಪಿಸಬೇಕು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಸಾವಿರಾರು, ಲಕ್ಷಾಂತರ ಜನ ಪ್ರವಾಸಿಗರು ಬಂದು ಹೋಗುತ್ತಿರುವ ಈ ಪ್ರದೇಶದಲ್ಲಿ ರಸ್ತೆಯ ಸೌಕರ್ಯವಿಲ್ಲ, ಕುಡಿಯುವ ನೀರಿಲ್ಲ. ಅಲ್ಲಿ ಮೂಲಭೂತ ಸೌಲಭ್ಯಗಳು ಬೇಕಾಗಿವೆ. ಈ ಪ್ರದೇಶದಲ್ಲಿ, ಮಾಘಮಾಸ, ಶ್ರಾವಣ ಮಾಸ ಮತ್ತು ಕಾರ್ತೀಕಮಾಸಗಳಲ್ಲಿ ಅನೇಕ ಜನರು ಬಂದು ಹೋಗುತ್ತಾರೆ. ಆದ್ದರಿಂದ ಈ ಪ್ರದೇಶವನ್ನು

ಅಭಿವೃದ್ಧಿ ಪಡಿಸತಕ್ಕಂಥ ಕೆಲಸವನ್ನು ಮಾಡಬೇಕು. ನಿಡಗಲ್ಲು ಇತಿಹಾಸದ ಬಗ್ಗೆ ಪ್ರಬಂಧವನ್ನು ಮಂಡಿಸಿ ಡಾ: ಚಿತ್ತಯ್ಯ ಪೂಜಾರಿ ಮತ್ತು ಕವಿತಾ ಎನ್ನುವವರಿಬ್ಬರು ಡಾಕ್ಟರೇಟನ್ನೂ ಕೂಡ ಪಡೆದಿದ್ದಾರೆ. ನಮ್ಮ ಈ ಒಂದು ಪ್ರದೇಶದಲ್ಲಿ ಬಂದು ಹೋಗುವಂಥ ಪ್ರವಾಸಿಗರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂಥ ಕೆಲಸವನ್ನು ಮಾಡಬೇಕು ಮತ್ತು ಅದನ್ನು ಪ್ರವಾಸೀ ಸ್ಥಳ ಎಂದು ಸರ್ಕಾರ ಘೋಷಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಸನ್ಮಾನ್ಯ ಸಚಿವರನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಬಿ.ಶ್ರೀರಾಮುಲು : ಪಾವಗಡ ತಾಲ್ಲೂಕಿನ ನಿಡಗಲ್ ಬೆಟ್ಟ ಒಂದು ಐತಿಹಾಸಿಕ ಪ್ರದೇಶವಾಗಿದೆ. ಅಲ್ಲಿ ವಿಜಯನಗರ ಸಾಮ್ರಾಜ್ಯದ ದೊರೆಗಳು ಮತ್ತು ಬೇರೆ ಬೇರೆ ರಾಜರುಗಳು ಆಡಳಿತ ಮಾಡಿದ್ದಾರೆ. ಬೆಟ್ಟದ ಮೇಲೆ ಬಸವೇಶ್ವರ ದೇವಸ್ಥಾನ, ಕೆಳಗೆ ಕಲ್ಲೇಶ್ವರ ದೇವಸ್ಥಾನ, ನಗರೇಶ್ವರ ದೇವಸ್ಥಾನ, ವೀರಭದ್ರ ದೇವಸ್ಥಾನಗಳಿವೆ. ಅದನ್ನು ಅಭಿವೃದ್ಧಿ ಪಡಿಸಬೇಕೆಂದರೆ ಬಹಳಷ್ಟು ಹಣ ಬೇಕಾಗುತ್ತದೆ. ಇದನ್ನು ಅಭಿವೃದ್ಧಿ ಪಡಿಸಲಿಕ್ಕಾಗಿ ತುಮಕೂರು ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ಮಾಡಲಾಗಿದೆ. ಪ್ರವಾಸೋದ್ಯಮ ಇಲಾಖೆಯಿಂದ ಈಗಾಗಲೇ 14 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿರುವ ಸಮಿತಿಯು ಮುಂದಿನ ದಿನಗಳಲ್ಲಿ ಒಂದು ಪ್ರಸ್ತಾವನೆಯನ್ನು ಕಳುಹಿಸಿದರೆ ಈ ಭಾಗದಲ್ಲಿ ಜೈನರು, ಅವರ ಇತಿಹಾಸವಿರಬಹುದು, ವಿಜಯನಗರದ ಇತಿಹಾಸವಿರಬಹುದು, ಅದನ್ನು ಯಾವ ರೀತಿಯಲ್ಲಿ ಅಭಿವೃದ್ಧಿ ಪಡಿಸಬೇಕು, ಪ್ರವಾಸಿಗರನ್ನು ಆಕರ್ಷಣೆ ಮಾಡಬೇಕು ಎನ್ನುವ ವಿಚಾರದಲ್ಲಿ ಅಲ್ಲಿಗೆ ಬೇಕಾದಂಥ ರಸ್ತೆಗಳು, ಕುಡಿಯುವ ನೀರು, ಶೌಚಾಲಯಗಳು, ರಸ್ತೆಗಳು ಇವುಗಳ ಬಗ್ಗೆ ಒಂದು ವರದಿಯನ್ನು ಆದಷ್ಟು ಬೇಗ ಅಲ್ಲಿರತಕ್ಕಂಥ ಸಮಿತಿಯವರು ಕಳುಹಿಸಿದರೆ, ಅದಕ್ಕೆ ಎಷ್ಟು ಹಣ ಬೇಕೋ ಅಷ್ಟು ಹಣವನ್ನು ಒದಗಿಸಿ ಕೊಡುತ್ತೇನೆಂದು ತಮ್ಮ ಮೂಲಕ ಶಾಸಕರಿಗೆ ನಾನು ತಿಳಿಸುತ್ತಿದ್ದೇನೆ.